ಮೈಸೂರ ಗೆಜೆಟ್.

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 8, ಸ್ಕ್ 1887.

ಈ ಭಾಗವನ್ನು ಪ್ರತ್ಯೇಕ ಶೀರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡ್ಡೆಂಟರು, ಚೀಫ್ ಜಡ್ಜ್ಗಳು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಬೆಂಗಳೂರು ಮುನಸೀಫ್ ಕೋರ್ಟ್‌ನಲ್ಲಿ.

1887ನೇ ಇಸವಿ ಒರಿಜಿನಲ್ ನಂಬರ್ 432.

ವಾದಿಗಳು.

ಆನೇಕಲ್ ತಾಲ್ಲೂಕು ಜಿಗಣೀ ಹೋಬಳೀ ಕಾಯಂಗುತ್ತಾ ಹುಲ್ಲುಹಳ್ಳೀಯಲ್ಲಿರುವರು ಚಿನ್ನಯ್ಯನ ಮಗ 1ನೇ ನಾರಪ್ಪ, 2ನೇ ನಂಜಯ್ಯನಮಗ ಪಳ್ಳಪ್ಪ, 3ನೇ ನಾರಪ್ಪಯ್ಯನ ಮಗ ಮುನಿಯಪ್ಪ, 4ನೇ ನಾರಪ್ಪನಮಗ ಮುನಿಯಪ್ಪ, 5ನೇ ಪಾಪಯ್ಯನಮಗ ಮುಲ್ಲಯ್ಯ, 6ನೇ ದೊಡ್ಡಯರ್ರಪ್ಪನ ಮಗಳು ಮುನ್ನಂಜಿ, 7ನೇ ಚಾಡಯ್ಯನ ಮಗಳು ರಾಮಕ್ಕ, 8ನೇ ಸಂಪನ ಮಗ ಮುನಿಯ, 9ನೇ ಕೃಷ್ಣಯ್ಯನ ಮಗ ವೆಂಕಟ, 10ನೇ ಮುನಿಯಪ್ಪನ ಮಗ ಪಿಲ್ಲಿಗಾ.

ಪ್ರತಿವಾದಿಗಳು.

ಬೆಂಗಳೂರು ಕಂಟೋರ್ಮೆಂಟಿನಲ್ಲಿ ಯಿರುವರು—1ನೇ ರಾಯಬಹದ್ದೂರ್ ಗೋವಿಂದಸೆಟ್ಟರ ಮಕ್ಕಳು ಗಂಗಾಧರಸೆಟ್ಟರು, 2ನೇ, 1ನೇ ಪ್ರತಿವಾದೀ ಭಾವಮೈದ ಮುನಿಸಾಮಿ ಸೆಟ್ಟರು, 3ನೇ, 1ನೇ ಪ್ರತಿವಾದೀ ಗುಮಾಸ್ತೇ ನಾರಣಪ್ಪನವರು, 4ನೇ ಬೆಂಗಳೂರು ತಾಲ್ಲೂಕು ಜೇಗೂರು ಹೋಬಳಿ ಶೆಟ್ಟಿಪಾಳ್ಯದಲ್ಲಿ ಯಿರುವ ಅಪ್ಪಯ್ಯಂಣ, 5ನೇ ಆನೇಕಲ್ ತಾ॥ ಕಾಯಂಗುತ್ತಾ ಹುಲ್ಲುಹಳ್ಳೀಲಿ ಇರುವ ಶೇತಯ್ಯನ ಮಗ ಕತ್ತೀ ಮುನಿಯ, 6ನೇ ಡಿಟೋ ವೂರಲ್ಲಿ ಇರುವ ಒಲಗೈ ಈರನ ಮಗ ತೋಟಿ ನಂಜ, 7ನೇ ಡಿಟೋ ವೂರಲ್ಲಿ ಇರುವ ಮುನಿಯನ ಮಗ ಆನೇಕಲ್ಲುಗಾ, 8ನೇ ಬೆಂಗಳೂರು ತಾ॥ ಜೇಗೂರು ಹೋಬಳಿ ಶಟ್ಟಿದಲ್ಲಿ ಇರುವ ಖಾಕಿಂಸಾಬೀಮಗ ಬಾಬೂಸಾಬಿ, 9ನೇ ಡಿಟೋ ಗ್ರಾಮದಲ್ಲಿ ಇರುವ ಇವನ ತಮ್ಮ ಯಿಮಾಂಸಾಬಿ.

ಆನೇಕಲ್ ತಾಲ್ಲೂಕು ಜಿಗಣೀ ಹೋಬಳಿ ಹುಲ್ಲುಹಳ್ಳೀಲಿ ಯಿರುವರು—1ನೇ ಕತ್ತೀ ಮುನಿಯ, 2ನೇ ಚಿಕ್ಕ ಈರ, 3ನೇ ಪಾಪ, 4ನೇ ನಾನಿಗ, 5ನೇ ಕುರುಬ ಮುನಿಗ, 6ನೇ ನರಸಿಂಹಯ್ಯ, 7ನೇ ಚಿಕ್ಕಕ್ಕ, 8ನೇ ಗುಂಡ, 9ನೇ ತಿಮ್ಮ, 10ನೇ ತಿಮ್ಮರಾಯ, 11ನೇ ಆನೇಕಲ್ಲುಗಾ, 12ನೇ ಮದ್ದೂರ, 13ನೇ ಮುನಿಗ, 14ನೇ ಲಿಂಗಾ, 15ನೇ ಕರಿಯ, 16ನೇ ದಾಸಮುನಿಯ, 17ನೇ ಗುಟ್ಟ, 18ನೇ ಮುತ್ತ, 19ನೇ ಅಳ್ಳಿಗ, 20ನೇ ನಂಜ—ಯಿವರುಗಳಿಗೂ ಮತ್ತು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಮೇಲ್ಕಂಡ ವಾದಿಗಳು ಪ್ರತಿವಾದಿಗಳ ಮೇಲೆ ದಾವಾ ಷೆಡ್ಯೂಲ್‌ನಲ್ಲಿ ಕಂಡ ಹುಲ್ಲುಗಾವಲ್ ಜಮೀನಿನಲ್ಲಿ ಲಾಗಾಯತಿನಿಂದ ತಮ್ಮ ದನಗಳನ್ನ ಮೇಯಿಸಿಕೊಳ್ಳುತ್ತಾ ಯಿದ್ದಂತೆ ಮುಂದೆಯೂ ಮೇಯಿಸಿಕೊಳ್ಳುವದಕ್ಕೆ ಪ್ರತಿವಾದಿಗಳು ಅಡ್ಡೀಮಾಡದಂತೆ ಶಾಶ್ವತವಾದ ಇಂಜಂಗ್ಷ್ಷ್ ಕೊಡಿಸಬೇಕೆಂದು ವಗೈರೇ ದಾವಾಮಾಡಿ ಯಿರುವ ಸಂಗತಿ ಯಿದರಿಂದ ಮೇಲ್ಕಂಡ ಜನಗಳಿಗೂ ಮತ್ತು ಸಮಸ್ತ ಜನಗಳಿಗೂ ತಿಳಿಯಪಡಿಸಿಯಿದೆ.

ಈ ವಿವಾದ ವಿಷಯಕ್ಕೆ ಸಂಬಂಧಪಟ್ಟವರು 87ನೇ ಇಸವಿ ಅಕ್ಟೋಬರು ತಿಂಗಳು 6ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟ್‌ಗೆ ಖುದ್ದಾಗಲಿ ಅಥವಾ ಪ್ಲೀಡರ್‌ಗಳ ಮೂಲಕವಾಗಲಿ ಹಾಜರಾಗಿ ತಮ್ಮ ಮೊಕದ್ದಮೆಯನ್ನ ತಿಳಿಸಬಹುದು.

ತಾರೀಖು 22ನೇ ಸೆಪ್ಟಂಬರ್ 1887.

ಸುಬ್ಬರಾಯರ್,
ಮುನಸೀಫ್.